# ಅವನು ಒಂಟಿ, ಅವಳು ಒಂಟಿ, ಒಲವೆ ಅವರ ಬದುಕು

ಸ್ಕಾಟಿಶ್ ನೃತ್ಯ ಪ್ರದರ್ಶಿಸುವ ವೇಳೆ ನೀನಾಳ ದೃಷ್ಟಿ ನನ್ನ ದೃಷ್ಟಿಯೊಂದಿಗೆ ಕಲೆತಾಗ ಅವಳು ಮುಗುಳ್ನಕ್ಕು, ಕೈಯಾಡಿಸಿದಳು. ಅವಳ ಆ ಮುಗುಳ್ನಗೆ ಮತ್ತು ಸಂಜ್ಞೆ ಎಲ್ಲಾ ಬದಲಾವಣೆಗೆ ಕಾರಣವಾಯಿತು. ನನ್ನೆಲ್ಲಾ ಗಾಬರಿ ಕೊನೆಗೊಂಡಿತು, ನಾನು ಅವ್ಯಕ್ತ ಸ್ಫೂರ್ತಿ ಮತ್ತು ಆತ್ಮವಿಶ್ವಾಸದಿಂದ ಬೀಗಿದೆ, ನಂತರ ಮೈಮರೆತು ನರ್ತಿಸಿದೆ. ನನ್ನ ನಾದಮಯ ಪದನ್ಯಾಸ ಮತ್ತು ಮುಖಮುದ್ರೆಯನ್ನು ನೀನಾ ಎವೆಯಿಕ್ಕದೆ ನೋಡುತ್ತಾ ಮುಗುಳ್ನಗುತ್ತಿದ್ದಳು, ನಾನು ನರ್ತಿಸುತ್ತಲೇ ಇದ್ದೆ.

ಅದು ನೀನಾಳೊಂದಿಗೆ ಲವ್ ಎಟ್ ಫಸ್ಟ್ ಸೈಟ್ ಆಗಿತ್ತು. ಅವಳು ತುಂಬಾ ಸುಂದರಿಯಾಗಿದ್ದಳು. ಅವಳ ಸೌಂದರ್ಯದ ಹೋಲಿಕೆಯನ್ನು ಬಿಳಿ ಮಹಿಳೆಯೊಂದಿಗೆ ಮಾಡಲು ಸಾಧ್ಯವಿಲ್ಲ, ಏಕೆಂದರೆ ಏಷಿಯನ್ ಮತ್ತು ಯೂರೋಪಿಯನ್ ಮಹಿಳೆಯರ ಸೌಂದರ್ಯಕ್ಕೆ ತನ್ನದೇ ಆದ ಒಂದು ಮಾನದಂಡವಿದೆ; ಅಂತೆಯೇ ಏಷಿಯನ್ ಮತ್ತು ಯೂರೋಪಿಯನ್ ಮಹಿಳೆಯರಲ್ಲಿ ಪರಸ್ಪರ ಹೋಲಿಕೆಯನ್ನು ಮಾಡಲಾಗದು. ನನಗೆ ನೀನಾಳ ಸೌಂದರ್ಯದಲ್ಲಿ ಒಂದು ವಿಶೇಷ ಆಕರ್ಷಣೆ ಕಾಣಬರುತ್ತಿದ್ದು, ಅದು ಸಹಜವಾಗಿಯೇ ಆಕರ್ಷಿಸುತ್ತಿತ್ತು. ಶ್ಯಾಮ ಸುಂದರ ವರ್ಣ, ದುಂಡು ಮೊಗ, ಸುಂದರ ನಯನಗಳು, ಕಪ್ಪನೆ ಕೇಶರಾಶಿ ಅವಳ ಎದೆಯ ಮೇಲೆ ಹರಡಿದಾಗ ಅವಳ ರೂಪ ಇನ್ನಷ್ಟು ಮೋಹಕವಾಗುತ್ತಿತ್ತು.

ನಾವು ಏಷಿಯನ್ ಮತ್ತು ಆಫ್ರಿಕನ್ ಹುಡುಗಿಯರನ್ನು ನೋಡಿ ಆಕರ್ಷಿತರಾಗುವುದಿಲ್ಲ ಎಂದು ನನ್ನ ಅನೇಕ ಮಿತ್ರರು ಹೇಳುತ್ತಿದ್ದ ಮಾತು ನನ್ನ ನೆನಪಿಗೆ ಬರುತ್ತದೆ. ನಾನು ವೈಯಕ್ತಿಕವಾಗಿ ಭಾರತೀಯ ಯುವತಿಯರನ್ನು ಇಷ್ಟಪಡುತ್ತೇನೆ. ಅವರು ರೂಪವಂತರು ಮತ್ತು ಯೋಗ್ಯ ಮಹಿಳೆಯರಾಗಿರುತ್ತಾರೆ. ನನ್ನ ಅಭಿಪ್ರಾಯದಲ್ಲಿ ಭಾರತದ ಯುವತಿಯರು ಸೌಂದರ್ಯದ ಮಾನದಂಡವನ್ನು ನಿರ್ಧರಿಸುತ್ತಾರೆ. ಬ್ರಿಟಿಷ್ ರಾಜಕುಮಾರರು ಸಹ ಭಾರತೀಯ ಯುವತಿಯರ ರೂಪದಿಂದ ಪ್ರಭಾವಿತರಾಗಿದ್ದರು. ಆಕರ್ಷಣೆ ಮತ್ತು ಕಾಮುಕತೆಯ ಅದ್ಭುತ ರಹಸ್ಯಗಳಲ್ಲಿ ಯಾವುದೂ ಸ್ಥಿರವಲ್ಲ.

ನೃತ್ಯ ಕಾರ್ಯಕ್ರಮಗಳು ಮುಗಿದ ನಂತರ ಚಪ್ಪಾಳೆಗಳ ಧ್ವನಿಗಳಿಂದ ವೇದಿಕೆ ಮತ್ತು ಸುತ್ತಮುತ್ತಲಿನ ಪ್ರದೇಶ ಪ್ರತಿಧ್ವನಿಸಿತು. ಈ ನಡುವೆ ನೀನಾ ತನ್ನ ಕುರ್ಚಿಯಿಂದೆದ್ದು, ನನ್ನೆಡೆಗೆ ಹಾರಿ ಬಂದಳು. ಹನ್ನೆರಡು ನರ್ತಕರಿದ್ದ ನಮ್ಮ ಸಮೂಹದಲ್ಲಿ ಅವಳು ನನ್ನನ್ನೇ ಗಮನಿಸುತ್ತಾ, ನನಗೆ ಶುಭ ಹಾರೈಸಲು ಬಂದಿದ್ದಳು! ನನಗೆ ಅತೀವ ಸಂತಸವಾಯಿತು. ನನ್ನನ್ನೇ ನಾನು ವಿಶೇಷ ವ್ಯಕ್ತಿಯೆಂದು ಭಾವಿಸಿದೆ.

‘ನಿಮ್ಮ ಡಾನ್ಸ್ ನೋಡಿ ತುಂಬಾ ಖುಷಿಯಾಯ್ತು’ ಎಂದಳು ನೀನಾ.

‘ಧನ್ಯವಾದಗಳು’

ಅವಳನ್ನು ನೋಡುತ್ತಲೇ, ಅವಳು ಸ್ಕಾಟ್ಲೆಂಡಿನಿಂದ ಬಂದಿಲ್ಲವೆಂದು ಅನ್ನಿಸಿತು. ಹೀಗಾಗಿ ಕೇಳಿದೆ–

‘ನೀವೆಲ್ಲಿಂದ ಬಂದಿದ್ದೀರಿ?’

‘ಕೋಪನ್‌ಹೇಗನ್, ಡೆನ್ಮಾರ್ಕ್‌ನಿಂದ’

‘ಓಹ್… ಡೆನ್ಮಾರ್ಕ್! ನಾನು ಮೊದಲ ಬಾರಿಗೆ ಡೆನ್ಮಾರ್ಕ್‌ನಿಂದ ಬಂದವರನ್ನು ಭೇಟಿಯಾಗುತ್ತಿದ್ದೇನೆ. ನಾನು ಅನೇಕ ದೇಶಗಳನ್ನು ಸುತ್ತಾಡಿದ್ದೇನೆ, ಆದರೆ ಕೋಪನ್‌ಹೇಗನ್‌ಗೆ ಹೋಗಿಲ್ಲ’ ಎಂದೆ.

‘ನಾನೂ ಎಡಿನ್‌ಬರ್ಗ್‌ಗೆ ಮೊದಲ ಬಾರಿಗೆ ಬಂದಿದ್ದೇನೆ’ ಅವಳು ಮುಗುಳ್ನಗುತ್ತಾ ಹೇಳಿದಳು, ‘ನನ್ನೊಂದಿಗೆ ನನ್ನ ಮಕ್ಕಳೂ ಇದ್ದಾರೆ’.

‘ಸರಿ, ನೀವೆಲ್ಲಿ ಉಳಿದುಕೊಂಡಿದ್ದೀರ?’

